
64

ಗೋರಿಗಳನ್ನು ಎತ್ತರಿಸಿ ಕಟ್ಟಬಹುದೇ?



الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575014

☆ ಗೋರಿಗಳನ್ನು ಎತ್ತರಿಸಿ ಕಟ್ಟಬಹುದೇ?

ಗೋರಿಗಳನ್ನು ಎತ್ತರಿಸಿ ಕಟ್ಟುವುದನ್ನು ಪ್ರವಾದಿ(ಸ) ವಿರೋಧಿಸಿದ್ದಾರೆ:

“ಜಾಬಿರ್(ರ) ರಿಂದ ವರದಿ: ಗೋರಿಗೆ ಸುಣ್ಣ ಬಳಿಯುವುದು, ಅದರ ಮೇಲೆ ಕೂರುವುದು ಮತ್ತು ಅದರ ಮೇಲೆ ಕಟ್ಟಡ ನಿರ್ಮಿಸುವುದನ್ನು ಪ್ರವಾದಿ(ಸ) ರವರು ವಿರೋಧಿಸಿದ್ದಾರೆ.” [ಮುಸ್ಲಿಂ 2/667; ಹದೀಸ್ ನಂ. 970]

“ಜಾಬಿರ್(ರ) ರಿಂದ ವರದಿ: ಗೋರಿಯ ಮೇಲೆ ಕೂರುವುದು, ಅದಕ್ಕೆ ಸುಣ್ಣ ಬಳಿಯುವುದು, ಅದರ ಮೇಲೆ ಕಟ್ಟಡ ನಿರ್ಮಿಸುವುದು ಮತ್ತು ಅದಕ್ಕೆ ಬೇರೆ ಮಣ್ಣನ್ನು ಸೇರಿಸಿ ಎತ್ತರಿಸಿಕಟ್ಟುವುದನ್ನು ಪ್ರವಾದಿ(ಸ) ರವರು ವಿರೋಧಿಸಿದ್ದಾರೆ.” [ಅಬೂ ದಾವೂದ್ 3/126; ಹದೀಸ್ ನಂ. 3226]

“ಜಾಬಿರ್(ರ) ರಿಂದ ವರದಿ: ಗೋರಿಯ ಮೇಲೆ ಕಟ್ಟಡ ನಿರ್ಮಿಸುವುದು, ಅದಕ್ಕೆ ಬೇರೆ ಮಣ್ಣನ್ನು ಸೇರಿಸಿ ಎತ್ತರಿ-ಸಿಕಟ್ಟುವುದು ಅಥವಾ ಅದಕ್ಕೆ ಸುಣ್ಣ ಬಳಿಯುವುದನ್ನು ಪ್ರವಾದಿ(ಸ) ರವರು ವಿರೋಧಿಸಿದ್ದಾರೆ.” [ಅನ್ನಸಾಈ ಪುಟ 323; ಹದೀಸ್ ನಂ. 2027]

“ಸುಮಾಮ(ರ) ರಿಂದ ವರದಿ: ಪ್ರವಾದಿ(ಸ) ರವರ ಕಾಲದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟರು. ಆ ವ್ಯಕ್ತಿಯ ದಫನ ಕಾರ್ಯದಲ್ಲಿ ಪ್ರವಾದಿ(ಸ) ರವರು ಉಪಸ್ಥಿತರಿದ್ದರು. ಆಗ ಪ್ರವಾದಿ(ಸ) ಹೇಳಿದರು: ನಿಮ್ಮ ಸಂಗಡಿಗನ ಗೋರಿಯನ್ನು ಹಗುರಗೊಳಿಸಿರಿ. ಅಂದರೆ ಅವನ ಗೋರಿಯ ಮೇಲೆ ಮಣ್ಣನ್ನು ಹೆಚ್ಚಿಸಬೇಡಿ.” [ಮುಸನ್ನಫ್ ಅಬ್ದುರ್ರಝ್ಝಾಕ್ 3/505; ಹದೀಸ್ ನಂ. 6492]

ಸಹಾಬಾಗಳು ಗೋರಿಗಳನ್ನು ಎತ್ತರಿಸಿ ಕಟ್ಟುತ್ತಿರಲಿಲ್ಲ:

“ಸುಮಾಮ(ರ) ರಿಂದ ವರದಿ: ನಾವು ಫುದಾಲ ಇಬ್ನ್

ಉಬೈದ್(ರ) ರೊಂದಿಗೆ ರೋಮಿನ ರೋದಿಸ್ ಎಂಬ ಪ್ರದೇಶದಲ್ಲಿದ್ದೆವು. ಆಗ ನಮ್ಮ ಸಂಗಡಿಗರೊಬ್ಬರು ನಿಧನರಾದರು. ಆಗ ಅವರ ಗೋರಿಯನ್ನು ನೆಲಕ್ಕೆ ಸಮತಟ್ಟಾಗಿ ನಿರ್ಮಿಸಲು ಫುದಾಲ(ರ) ಆದೇಶಿಸಿದರು. ನಂತರ ಅವರು ಹೇಳಿದರು: ಗೋರಿಗಳನ್ನು ನೆಲಸಮ ಮಾಡಬೇಕೆಂದು ಪ್ರವಾದಿ(ಸ) ರವರು ಆದೇಶಿಸುವು-ದನ್ನು ನಾನು ಕೇಳಿದ್ದೇನೆ." [ಮುಸ್ಲಿಂ 2/666; ಹದೀಸ್ ನಂ. 968]

"ಅಮ್ರ್ ಇಬ್ನ್ ಶುರಹ್ಬೀಲ್(ರ) ಹೇಳುತ್ತಾರೆ: ನನ್ನ ಗೋ-ರಿಯನ್ನು ಎತ್ತರಿಸಿಕಟ್ಟಬೇಡಿ. ಏಕೆಂದರೆ ಮುಹಾಜಿರರು ಗೋರಿಗಳನ್ನು ಎತ್ತರಿಸಿಕಟ್ಟುವುದನ್ನು ಅಸಹ್ಯಪಡುವುದ-ನ್ನು ನಾನು ಕಂಡಿದ್ದೇನೆ." [ಇಬ್ನ್ ಸಅ್‌ದ್: ತಬಕಾತುಲ್ ಕೂಫಿಯ್ಯೀನ್ 8/228]

ಅಲ್‌ಫೈರೂಝಾಬಾದಿ(ರ) ಹೇಳುತ್ತಾರೆ:

“ಸಹಾಬಾಗಳು ಗೋರಿಯನ್ನು ಎತ್ತರಿಸಿ ಕಟ್ಟುತ್ತಿರಲಿಲ್ಲ. ಗೋರಿಯ ಮೇಲೆ ಇಟ್ಟಿಗೆ, ಗಾರೆ, ಕಲ್ಲು ಅಥವಾ ಇನ್ನಿತರ ಯಾವುದೇ ವಸ್ತುಗಳಿಂದ ಏನನ್ನೂ ಕಟ್ಟುತ್ತಿರಲಿಲ್ಲ. ಅವರು ಗೋರಿಯ ಮೇಲೆ ಕಟ್ಟಡವನ್ನೋ, ಗುಮ್ಮಟವನ್ನೋ ನಿರ್ಮಿಸುತ್ತಿರಲಿಲ್ಲ. ಇವೆಲ್ಲವೂ ಅನಾಚಾರಗಳಾಗಿವೆ, ಅಸಹ್ಯಕಾರ್ಯಗಳಾಗಿವೆ ಮತ್ತು ಪ್ರವಾದಿ(ಸ) ರವರ ಮಾರ್ಗಕ್ಕೆ ವಿರುದ್ಧವಾದ ವಿಷಯಗಳಾಗಿವೆ.” [ಸಿಫ್ರು ಸ್ಸಆದಃ ಪುಟ 57]

ಅಸ್ಸಂಹೂದೀ(ರ) ಹೇಳುತ್ತಾರೆ:

“ಅಲ್‌ಮತರೀ(ರ) ಹೇಳುವಂತೆ ಪ್ರವಾದಿ(ಸ) ರವರ ಕಾಲದಲ್ಲಿ ನಿಧನರಾದ ಮತ್ತು ಅವರ ಮರಣಾನಂತರ ನಿಧನರಾದ ಹೆಚ್ಚಿನ ಸಹಾಬಿಗಳನ್ನು ಮದೀನದ ಬಕೀಅ್ ದಫನಭೂಮಿಯಲ್ಲಿ ದಫನ ಮಾಡಲಾಗಿತ್ತು. ಅದೇ ರೀತಿ ಪ್ರವಾದಿ(ಸ) ರವರ ಕುಟುಂಬದ ಹಿರಿಯರನ್ನು ಮತ್ತು ಹಿರಿಯ ತಾಬಿಊನ್‌ರನ್ನು ಅಲ್ಲೇ ದಫನ

ಮಾಡಲಾಗಿತ್ತು.

ಸಹಾಬಿಗಳ ಪೈಕಿ ಸುಮಾರು ಹತ್ತು ಸಾವಿರ ಮಂದಿ ಮದೀನದಲ್ಲಿ ನಿಧನರಾಗಿದ್ದರು. ಉಳಿದವರು ಇತರ ಕಡೆಗಳಿಗೆ ಚದುರಿಹೋದರೆಂದು ಕಾದೀ ಇಯಾದ್(ರ) ತಮ್ಮ 'ಅಲ್‌ಮದಾರಿಕ್' ಎಂಬ ಗ್ರಂಥದಲ್ಲಿ ಇಮಾಮ್ ಮಾಲಿಕ್(ರ) ರಿಂದ ಉದ್ಧರಿಸಿ ಹೇಳಿದ್ದಾರೆ.

ಅಲ್‌ಮಜ್ದ್(ರ) ಹೇಳುತ್ತಾರೆ: ಬಕೀಅ್ ದಫನಭೂಮಿಯು ಶ್ರೇಷ್ಠ ವ್ಯಕ್ತಿಗಳಿಂದ ಮತ್ತು ಸಮುದಾಯದ ಮುಖಂಡರಿಂದ ತುಂಬಿಕೊಂಡಿದೆಯೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಸಲಫು ಸ್ವಾಲಿಹ್ (ಸಹಾಬಾ) ಗಳು ಗೋರಿಗಳನ್ನು ಮಹತ್ವೀಕರಿಸುವುದರಿಂದ ಮತ್ತು ಎತ್ತಿಕಟ್ಟಿ ಸುಣ್ಣ ಬಳಿಯುವುದರಿಂದ ದೂರವಿದ್ದದ್ದೇ ಅನೇಕ ಗೋರಿಗಳ ಗುರುತು ಅಳಿದು ಹೋಗಲು ಕಾರಣವಾಗಿದೆ. ಆದ್ದರಿಂದಲೇ ಅವರಲ್ಲಿರುವ ಪ್ರಮುಖರ ಪೈಕಿ ಬೆರಳೆಣಿಕೆಯಷ್ಟು ಮಂದಿಯ ಗೋರಿಗಳ ಹೊರತು

ಉಳಿದೆಲ್ಲಾ ಗೋರಿಗಳು ಅಜ್ಞಾತವಾಗಿಯೇ ಉಳಿದಿವೆ". [ವಫಾಉಲ್ ವಫಾ 3/916]

ಪ್ರವಾದಿ(ಸ) ರವರ ಪ್ರೀತಿಯ ಮಗಳು ಫಾತಿಮಾ(ರ) ರ ಗೋರಿಯ ಬಗ್ಗೆ ಅವರು ಹೇಳುತ್ತಾರೆ:

"ಸಲಫ್‌ಗಳು (ಸಹಾಬಿಗಳು) ಗೋರಿಗಳ ಮೇಲೆ ಕಟ್ಟಡ ನಿರ್ಮಿಸುವುದೋ ಅವುಗಳಿಗೆ ಸುಣ್ಣ ಬಳಿಯುವುದೋ ಮಾಡುತ್ತಿರಲಿಲ್ಲ. ಆದ್ದರಿಂದ ಫಾತಿಮಾ(ರ) ಹಾಗೂ ಇತರ ಸಹಾಬಿಗಳ ಗೋರಿಗಳು ಎಲ್ಲಿವೆಯೆಂದು ಪತ್ತೆಹಚ್ಚಲು ಸಾಧ್ಯವಾಗದೆ ಹೋಗಿದೆ." [ವಫಾಉಲ್ ವಫಾ 3/906]

ಪ್ರವಾದಿ(ಸ) ರವರ ಗೋರಿಯನ್ನು ಒಂದು ಗೇಣಿಗಿಂತ ಹೆಚ್ಚು ಎತ್ತರಿಸಲಾಗಿಲ್ಲ:

"ಜಾಬಿರ್(ರ)ರಿಂದ: ಪ್ರವಾದಿ(ಸ) ರಿಗೆ ಲಹ್ದ್ ರೀತಿಯ ಗೋರಿಯನ್ನು ತೋಡಲಾಗಿತ್ತು. ಗೋರಿಯ (ತಲೆಯ

ಭಾಗದಲ್ಲೊಂದು) ಕಲ್ಲನ್ನಿಡಲಾಗಿತ್ತು ಮತ್ತು ಅವರ ಗೋರಿಯನ್ನು ಭೂಮಿಯಿಂದ ಸರಿಸುಮಾರು ಒಂದು ಗೇಣಿನಷ್ಟು ಮಾತ್ರ ಎತ್ತರಿಸಲಾಗಿತ್ತು." [ಇಬ್ನ್ ಹಿಬ್ಬಾನ್ 14/602; ಹದೀಸ್ ನಂ. 6635]

ಸುಫ್ಯಾನ್ ಅತ್ತಮ್ಮಾರ್(ರ) ರಿಂದ ವರದಿ: ಪ್ರವಾದಿ(ಸ) ರವರ ಗೋರಿಯನ್ನು ತಸ್ನೀಮ್ ಮಾಡಿರುವುದನ್ನು ಅವರು ಕಂಡಿದ್ದಾರೆ." [ಅಲ್‌ಬುಖಾರಿ 1/427; 1390]

ಇಮಾಂ ಅಲ್‌ಕುರ್ತುಬೀ(ರ) ಹೇಳುತ್ತಾರೆ:

"ತಸ್ನೀಮ್ ಎಂದರೆ ಒಂದು ಗೇಣಿನಷ್ಟು ಎತ್ತರಿಸುವುದು." [ತಫ್ಸೀರ್ ಅಲ್‌ಕುರ್ತುಬೀ 13/244]

ಅಲ್‌ಕಾಸಿಮ್(ರ) ರಿಂದ ವರದಿ: ನಾನು ಆಯಿಶಾ(ರ) ರವರ ಬಳಿ ಹೋಗಿ ಹೇಳಿದೆ: "ಅಮ್ಮಾ, ನನಗೆ ಪ್ರವಾದಿ(ಸ) ರವರ ಮತ್ತು ಅವರ ಇಬ್ಬರು ಸಂಗಾತಿಗಳ (ಅಬೂಬಕರ್(ರ) ಮತ್ತು ಉಮರ್(ರ)) ಗೋರಿಗಳನ್ನು

ತೋರಿಸಿರಿ." ಅವರು ನನಗೆ ಮೂರು ಗೋರಿಗಳನ್ನೂ ತೋರಿಸಿದರು. ಅವು ಎತ್ತರಿಸಲ್ಪಟ್ಟಿರಲಿಲ್ಲ, ಭೂಮಿಯೊಂದಿಗೆ ಸಮತಟ್ಟಾಗಿಯೂ ಇರಲಿಲ್ಲ. ಮರುಭೂಮಿಯ ಕೆಂಪು ಹರಳುಗಳನ್ನು ಅವುಗಳ ಮೇಲೆ ಹರಡಲಾಗಿತ್ತು." [ಅಬೂದಾವೂದ್ 3/215; ಹದೀಸ್ ನಂ. 3220]

ಗುನೈಮ್ ಇಬ್ನ್ ಬಿಸ್ತಾಮ್ ಅಲ್‌ಮದೀನೀ(ರ) ರಿಂದ ವರದಿ: ಖಲೀಫ ಉಮರ್ ಇಬ್ನ್ ಅಬ್ದುಲ್ ಅಝೀಝ್(ರ) ರವರ ಆಡಳಿತ ಕಾಲದಲ್ಲಿ ನಾನು ಪ್ರವಾದಿ(ಸ) ರವರ ಗೋರಿಯನ್ನು ನೋಡಿದ್ದೇನೆ. ಅದನ್ನು ನಾಲ್ಕು ಬೆರಳುಗಳಷ್ಟು ಮಾತ್ರ ಎತ್ತರಿಸಲಾಗಿತ್ತು." [ಫತ್‌ಹುಲ್ ಬಾರಿ 3/257]

ಇಮಾಂ ಅಲ್‌ಕುರ್ತುಬೀ(ರ) ಹೇಳುತ್ತಾರೆ:

"ನಮ್ಮ ಉಲಮಾಗಳು ಹೇಳುತ್ತಾರೆ: ಗೋರಿಯನ್ನು ನೆಲಸಮ ಮಾಡಬೇಕು ಎಂಬುದರ ಬಾಹ್ಯಾರ್ಥದ

ಪ್ರಕಾರ ಗೋರಿಯನ್ನು ತಸ್ನೀಮ್ ಮಾಡುವುದು ಮತ್ತು ಎತ್ತರಿಸುವುದು ನಿಷಿದ್ಧವಾಗಿದೆ. ಗೋರಿಯು ನೆಲದೊಂದಿಗೆ ಸಮತಟ್ಟಾಗಿರಬೇಕಾಗಿದೆ. ಉಲಮಾಗಳ ಪೈಕಿ ಕೆಲವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. ಆದರೆ ಬಹುತೇಕ ಉಲಮಾಗಳ ಅಭಿಪ್ರಾಯ ಪ್ರಕಾರ ನಿವಾರಿಸಬೇಕೆಂದು ಹೇಳಿರುವ ಎತ್ತರಿಸುವಿಕೆಯು ತಸ್ನೀಮ್‌ಗಿಂತ (ಒಂದು ಗೇಣಿಗಿಂತ) ಹೆಚ್ಚಿರುವುದಾಗಿದೆ. ಗೋರಿಯನ್ನು ಗುರುತಿಸಲು ಮತ್ತು ಆದರಿಸಲು ಇಷ್ಟು (ಒಂದು ಗೇಣು) ಎತ್ತರವಿರಬೇಕಾಗಿದೆ. ಇಮಾಂ ಮಾಲಿಕ್(ರ) ತಮ್ಮ ಮುವತ್ತದಲ್ಲಿ ವರದಿ ಮಾಡಿದ ಪ್ರಕಾರ ನಮ್ಮ ಪ್ರವಾದಿ ಮುಹಮ್ಮದ್(ಸ) ರವರ ಮತ್ತು ಅವರ ಇಬ್ಬರು ಸಂಗಡಿಗರ (ಅಬೂಬಕರ್ ಮತ್ತು ಉಮರ್) ಗೋರಿಯ ರೂಪವು ಈ ರೀತಿಯಲ್ಲಿತ್ತು (ಒಂದು ಗೇಣಿನಷ್ಟು ಎತ್ತರಿಸಲಾಗಿತ್ತು)." [ತಫ್ಸೀರ್ ಅಲ್‌ಕುರ್ತುಬೀ 13/243-244]

ಗೋರಿಗಳನ್ನು ಎತ್ತರಿಸಿ ಕಟ್ಟುವುದನ್ನು ಉಲಮಾಗಳು ವಿರೋಧಿಸಿದ್ದಾರೆ:

ಇಮಾಂ ಅಹ್ಮದ್(ರ) ಹೇಳುತ್ತಾರೆ:

“ಗೋರಿಯಿಂದ ತೆಗೆದ ಮಣ್ಣನ್ನಲ್ಲದೆ ಬೇರೆ ಮಣ್ಣನ್ನು ಗೋರಿಗೆ ಸೇರಿಸಬಾರದು. ಬದಲಾಗಿ ಗೋರಿಯನ್ನು ಗುರುತು ಹಚ್ಚಲು ಸಾಧ್ಯವಾಗದಂತೆ ಭೂಮಿಯೊಂದಿಗೆ ಸಮತಟ್ಟುಗೊಳಿಸಬೇಕು.” [ಮಸಾಇಲುಲ್ ಇಮಾಂ ಅಹ್ಮದ್ ಪುಟ 224]

ಇಮಾಂ ಅಲ್‌ಕುರ್ತುಬೀ(ರ) ಹೇಳುತ್ತಾರೆ:

“ಇಲ್ಲಿ ವಿರೋಧಿಸಲ್ಪಟ್ಟ ಮತ್ತು ಅನುಮತಿಸಲ್ಪಟ್ಟ ವಿಷಯಗಳು ಉದ್ಭವವಾಗುತ್ತವೆ. ಆದರೆ ಗೋರಿಯ ಮೇಲೆ ಆರಾಧನಾಲಯ ನಿರ್ಮಿಸುವುದು, ಅಲ್ಲಿ (ಆ ಆರಾಧನಾಲಯಗಳಲ್ಲಿ) ನಮಾಝ್ ಮಾಡುವುದು, ಅವುಗಳ (ಗೋರಿಗಳ) ಮೇಲೆ ಕಟ್ಟಡ ನಿರ್ಮಿಸುವುದು

ಮುಂತಾದ ಸುನ್ನತ್ (ಹದೀಸ್)ನಲ್ಲಿ ವಿರೋಧಿಸಲಾದ ಕಾರ್ಯಗಳು ನಿಷಿದ್ಧವಾಗಿವೆ. ಅವು ಸಮ್ಮತಾರ್ಹವಲ್ಲ". [ತಫ್ಸೀರ್ ಅಲ್‌ಕುರ್ತುಬೀ 13/242]

ಇಬ್ನ್ ಹಜರ್ ಅಲ್‌ಹೈತಮೀ(ರ) ಹೇಳುತ್ತಾರೆ:

"ಗೋರಿಗಳ ಮೇಲೆ ನಿರ್ಮಿಸಲಾದ ಕಟ್ಟಡಗಳನ್ನು ಮತ್ತು ಗೋರಿಗಳ ಮೇಲೆ ನಿರ್ಮಿಸಲಾದ ಗುಮ್ಮಟಗಳನ್ನು ಕೆಡವುವುದಕ್ಕಾಗಿ ಮುನ್ನುಗ್ಗಬೇಕಾದುದು ಕಡ್ಡಾಯವಾಗಿದೆ. ಏಕೆಂದರೆ ಅವು ಮಸ್ಜಿದುದ್ದಿರಾರ್ (ಮುನಾಫಿಕ್‌ಗಳು ನಿರ್ಮಿಸಿದ ಮಸೀದಿ)ಗಿಂತಲೂ ಅಪಾಯಕಾರಿಯಾಗಿವೆ. ಏಕೆಂದರೆ ಅವು (ಗೋರಿಗಳು) ಪ್ರವಾದಿ(ಸ) ರವರ ಆಜ್ಞೆಯನ್ನು ಧಿಕ್ಕರಿಸಿ ನಿರ್ಮಿಸಲ್ಪಟ್ಟವುಗಳಾಗಿವೆ. ಪ್ರವಾದಿ(ಸ) ರವರು ಇವೆಲ್ಲವನ್ನು ವಿರೋಧಿಸಿದ್ದಾರೆ ಮತ್ತು ಎತ್ತರಿಸಲಾದ ಗೋರಿಗಳೆಲ್ಲವನ್ನೂ ಕೆಡವಿ ಹಾಕಲು ಆಜ್ಞಾಪಿಸಿದ್ದಾರೆ. ಹಾಗೆಯೇ ಗೋರಿಗಳ ಮೇಲಿರುವ ಸರ್ವ ದೀಪಗಳನ್ನೂ ಬೆಳಕುಗಳನ್ನೂ ತೊಲಗಿಸುವುದು

ಕಡ್ಡಾಯವಾಗಿದೆ. ಇವುಗಳ ವಕ್‌ಫ್ ಮತ್ತು ಹರಕೆ ಸಿಂಧುವಾಗುವುದಿಲ್ಲ." [ಅಝ್ಝುವಾಜಿರ್ 1/155]

ಅಲ್‌ಮುನಾವೀ(ರ) ಹೇಳುತ್ತಾರೆ:

"ಇಮಾಮ್ ಅಲ್‌ಬುಖಾರಿ ಮತ್ತು ಮುಸ್ಲಿಮ್ ಉದ್ಧರಿಸಿದ ಹದೀಸುಗಳಲ್ಲಿ ಯಾವುದೇ ಸ್ಥಿತಿಯಲ್ಲೂ ಗೋರಿಗಳ ಮೇಲೆ ಆರಾಧನಾಲಯ ನಿರ್ಮಿಸುವುದು ಕರಾಹತ್ ಎಂದಿದೆ. ಇಲ್ಲಿ ಉದ್ದೇಶಿಸಲಾಗಿರುವ ಗೋರಿಗಳು ಮುಸ್ಲಿಮರ ಗೋರಿಗಳಾಗಿವೆ. ಏಕೆಂದರೆ ಇದರಿಂದ ಗೋರಿಯಲ್ಲಿರುವ ವ್ಯಕ್ತಿ ಆರಾಧಿಸಲ್ಪಡುವ ಭಯವಿದೆ." [ಫೈದುಲ್ ಕದೀರ್ 4/466]

ಎತ್ತರಿಸಲ್ಪಟ್ಟ ಗೋರಿಗಳನ್ನು ನೆಲಸಮ ಮಾಡಬೇಕು:

"ಅಬುಲ್ ಹಯ್ಯಾಜ್(ರ) ರಿಂದ ವರದಿ: ಅಲೀ(ರ) ನನ್ನೊಂದಿಗೆ ಹೇಳಿದರು: ಪ್ರವಾದಿ(ಸ)ರವರು ನನ್ನನ್ನು ಕಳುಹಿಸಿದ ಅದೇ ಕಾರ್ಯಕ್ಕಾಗಿ ನಾನು ನಿನ್ನನ್ನು

ಕಳುಹಿಸಲೇ? ಒಂದೇ ಒಂದು ವಿಗ್ರಹವನ್ನೂ ಅಳಿಸದೆ ಬಿಡಬಾರದು ಮತ್ತು ಎತ್ತರಿಸಲಾದ ಒಂದೇ ಒಂದು ಗೋರಿಯನ್ನೂ ನೆಲಸಮ ಮಾಡದೆ ಬಿಡಬಾರದು." [ಮುಸ್ಲಿಂ 2/666; ಹದೀಸ್ ನಂ. 969]

"ಅಬೂ ವಾಇಲ್(ರ) ರಿಂದ ವರದಿ: ಅಲೀ(ರ) ಅಬುಲ್ ಹಯ್ಯಾಜ್(ರ) ರೊಂದಿಗೆ ಹೇಳಿದರು: ಪ್ರವಾದಿ(ಸ) ರವರು ನನ್ನನ್ನು ಕಳುಹಿಸಿದ ಅದೇ ಕಾರ್ಯಕ್ಕಾಗಿ ನಾನು ನಿನ್ನನ್ನು ಕಳುಹಿಸುತ್ತಿದ್ದೇನೆ. ಎತ್ತರಿಸಲಾದ ಒಂದೇ ಒಂದು ಗೋರಿಯನ್ನೂ ಅಂದರೆ ಮುಸ್ಲಿಮರ ಗೋರಿಗಳನ್ನು ನೀನು ನೆಲಸಮಗೊಳಿಸದೆ ಬಿಡಬಾರದು. ಮತ್ತು ಬೈತುಲ್ ಹರಾಮ್‌ನಲ್ಲಿರುವ ಒಂದೇ ಒಂದು ವಿಗ್ರಹ-ವನ್ನೂ ನೀನು ಅಳಿಸದೆ ಬಿಡಬಾರದು." [ಮುಸನ್ನಫ್ ಅಬ್ದುರ್ರಝ್ಝಾಕ್ 3/503-504; ಹದೀಸ್ ನಂ. 6487]

ಇಮಾಂ ಅಶ್ಶೌಕಾನಿ(ರ) ಹೇಳುತ್ತಾರೆ:

“ಈ ಹದೀಸಿನ ವ್ಯಾಪ್ತಿಯಲ್ಲಿ ಮೊಟ್ಟಮೊದಲು ಒಳಪಡುವುದು ಗೋರಿಗಳ ಮೇಲೆ ನಿರ್ಮಿಸಲಾದ ಗುಮ್ಮಟಗಳು ಮತ್ತು ದರ್ಗಾಗಳಾಗಿವೆ. ಇದು ಗೋರಿಗಳನ್ನು ಮಸೀದಿಗಳನ್ನಾಗಿ ಮಾಡುವುದಾಗಿದೆ. ಪ್ರವಾದಿ(ಸ) ರವರು ಹೀಗೆ ಮಾಡುವವರನ್ನು ಶಪಿಸಿದ್ದಾರೆ.” [ನೈಲುಲ್ ಅವ್ತಾರ್ 7/428-429]

ಇಮಾಮ್ ಅಶ್ಶಾಫಿಈ(ರ) ಹೇಳುತ್ತಾರೆ:

“ಮುಹಾಜಿರರ ಮತ್ತು ಅನ್ಸಾರ್‌ಗಳ ಗೋರಿಗಳಿಗೆ ಸುಣ್ಣ ಬಳಿದದ್ದನ್ನು ನಾನು ಕಂಡಿಲ್ಲ. ತಾವೂಸ್ ಹೇಳುತ್ತಾರೆ: ಗೋರಿಗಳನ್ನು ಕಟ್ಟುವುದನ್ನು ಮತ್ತು ಸುಣ್ಣ ಬಳಿಯುವುದನ್ನು ಪ್ರವಾದಿ(ಸ)ರವರು ವಿರೋಧಿಸಿದ್ದಾರೆ. ಅಶ್ಶಾಫಿಈ(ರ) ಹೇಳುತ್ತಾರೆ: ಮಕ್ಕಾದ ಆಡಳಿತಗಾರರು ಎತ್ತರಿಸಿಕಟ್ಟಿದ ಗೋರಿಗಳನ್ನು ಕೆಡವುವುದನ್ನು ನಾನು ಕಂಡಿದ್ದೇನೆ. ಆದರೆ ಕರ್ಮಶಾಸ್ತ್ರ ವಿದ್ವಾಂಸರು ಅದನ್ನು ಆಕ್ಷೇಪಿಸುವುದನ್ನು ನಾನು ಕಂಡಿಲ್ಲ.” [ಅಲ್‌ಉಮ್ಮ್

2/631]

ಇಮಾಂ ಅನ್ನವವೀ(ರ) ಹೇಳುತ್ತಾರೆ:

“ಸುನ್ನತ್ತಿನ ಪ್ರಕಾರ ಗೋರಿಯನ್ನು ಭೂಮಿಗಿಂತ ಅತಿಯಾಗಿ ಎತ್ತರಿಸಬಾರದು ಮತ್ತು ದುಂಡಾಕಾರವಾಗಿ ಮಾಡಬಾರದು. ಬದಲಾಗಿ ಕೇವಲ ಒಂದು ಗೇಣು ಎತ್ತರಿಸಬೇಕು ಮತ್ತು ಚಪ್ಪಟೆಯಾಗಿ ಮಾಡಬೇಕು. ಇದು ಇಮಾಂ ಅಶ್ಶಾಫಿಈ ಮತ್ತು ಅವರ ಶಿಷ್ಯರ ಮದ್‌ಹಬ್ ಆಗಿದೆ.” [ಶರ್ಹ್ ಮುಸ್ಲಿಂ 3/389]

ಇಬ್ನ್ ಹಜರ್ ಅಲ್‌ಹೈತಮೀ(ರ) ಹೇಳುತ್ತಾರೆ:

“ಆದ್ದರಿಂದ ಸಾರ್ವಜನಿಕ ಕಬರಸ್ಥಾನದಲ್ಲಿರುವ ಸರ್ವ ಗೋರಿಗಳನ್ನೂ ಕೆಡವಿ ಹಾಕುವುದು ಆಡಳಿತಗಾರರ ಕಡ್ಡಾಯ ಕರ್ತವ್ಯವಾಗಿದೆ. ಇಮಾಮ್ ಅಶ್ಶಾಫಿಈಯವರ ಗೋರಿಯ ಮೇಲೆ ನಿರ್ಮಿಸಲಾದ ಗುಮ್ಮಟವನ್ನು, ಅದು ಸಾವಿರಾರು ದೀನಾರ್‌ಗಳನ್ನು ಖರ್ಚು ಮಾಡಿ

ನಿರ್ಮಿಸಿದ್ದಾಗಿದ್ದರೂ ಸಹ ಅದನ್ನು ಕೆಡವಲು ಪ್ರಸಿದ್ಧ ಶಾಫಿಈ ವಿದ್ವಾಂಸರ ಒಂದು ದೊಡ್ಡ ಗುಂಪು ಫತ್ವಾ ನೀಡಿದೆ. ಏಕೆಂದರೆ ಅದು ಸಾರ್ವಜನಿಕ ಕಬರಸ್ಥಾನದಲ್ಲಿದೆ." [ಅಲ್‌ಫತಾವಲ್ ಕುಬ್ರಾ 2/24-25]